19

ಇಲಾಖೆ / ವಿಷಯ : DEPARTMENT / SUBJECT: ಪ್ರಧಾನಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 27

# ಒಂದು ದೇಶ ಒಂದು ಚುನಾವಣೆ

■ ವಿಜಯವಾಣಿ ಸುದ್ದಿಜಾಲ ನವದೆಹಲಿ 27/11/20

'ಒಂದು ದೇಶ ಒಂದು ಚುನಾವಣೆ' ಸಾಧ್ಯತೆ ಸಾಕಾರಗೊಳ್ಳಬೇಕು ಎಂದು ಪುನರುಚ್ಚರಿಸಿರುವ ಪ್ರಧಾನಿ ನರೇಂದ್ರ ಮೋದಿ, ಪ್ರತಿ ವಿವಿಧ ಸ್ಥಳಗಳಲ್ಲಿ ಚುನಾವಣೆಗಳು ನಡೆಯುತ್ತಿರುತ್ತವೆ. ಇದರಿಂದ ಅಭಿವೃದ್ಧಿ ಚಟುವಟಿಕೆಗಳು ಕುಂಠಿತಗೊಳ್ಳುತ್ತಿವೆ. ಹೀಗಾಗಿ, ದೇಶಕ್ಕೊಂದೇ ಚುನಾವಣೆ ಎಂಬ ಬಗ್ಗೆ ಆಳವಾದ ಅಧ್ಯಯನ ಮತ್ತು ಚರ್ಚೆ ನಡೆಸಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.



» ಸ್ಪೀಕರ್, ಸಭಾಪತಿಗಳ ಸಮ್ಮೇಳನದಲ್ಲಿ ಪ್ರಧಾನಿ ಪ್ರಸ್ತಾಪ

ಗುಜರಾತ್‌ನ ನರ್ಮದಾ ಜಿಲ್ಲೆಯಲ್ಲಿರುವ ಕೆವಡಿಯಾದಲ್ಲಿ ನಡೆದ ಅಖಿಲ ಭಾರತ ವಿಧಾನಸಭೆಗಳ ಸ್ಪೀಕರ್ ಮತ್ತು ವಿಧಾನಪರಿಷತ್ ಸಭಾಪತಿಗಳ ಸಮ್ಮೇಳನ ಸಮಾರಂಭದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತನಾಡಿದರು. ಲೋಕಸಭೆ, ವಿಧಾನಸಭೆ ಮತ್ತು ಪಂಚಾಯತ್ ಚುನಾವಣೆಗಳಿಗೆ ಒಂದೇ ಮತದಾರ ಪಟ್ಟಿ ಇರಬೇಕು. ಪತ್ಯೇಕ ಪಟ್ಟಿಗಳಿಂದ ಸಂಪನ್ಮೂಲ ಪೋಲಾಗುತ್ತಿದೆ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಸಮನ್ವಯದಿಂದ ಕೆಲಸ ಮಾಡಿ, ಪ್ರತಿ ನಿರ್ಧಾರಕ್ಕೂ ರಾಷ್ಟ್ರೀಯ ಹಿತಾಸಕ್ತಿಯೇ ಆಧಾರವಾಗಬೇಕು ಎಂದು ಪ್ರತಿಪಾದಿಸಿದರು.

ಅಸ್ಪೃಶ್ಯತೆಯ ರಾಜಕಾರಣಕ್ಕೆ ಈಗ ಸ್ಥಾನವಿಲ್ಲ. ಬಿಜೆಪಿ ಅಥವಾ ಜನಸಂಘದ ಹಿನ್ನೆಲೆಯಿಲ್ಲದಿದ್ದರೂ ಸರ್ದಾರ್ ವಲ್ಲಭಭಾಯಿ ಪಟೇಲರ ಏಕತೆಯ ಪ್ರತಿಮೆಯನ್ನು ನಾವು ನಿರ್ಮಾಣ ಮಾಡಿದೆವು. 21ನೇ ಶತಮಾನದಲ್ಲಿ ಸವಾಲುಗಳನ್ನು ಎದುರಿಸಲು ಸಂವಿಧಾನವೇ ನಮಗೆ ಬೆಳಕಾಗಿದೆ. ಈ ಸಂವಿಧಾನದ ಬಗ್ಗೆ ತಿಳಿದುಕೊಳ್ಳುವ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದರು. 1921ರಿಂದ ಪ್ರತಿ ವರ್ಷ ಅಖಿಲ ಭಾರತ ವಿಧಾನಸಭೆಗಳ ಸ್ಪೀಕರ್ ಮತ್ತು ವಿಧಾನಪರಿಷತ್ ಸಭಾಪತಿಗಳ ಸಮ್ಮೇಳನ ನಡೆಯುತ್ತಿದೆ. 'ಶಾಸಕಾಂಗ-ಕಾರ್ಯಾಂಗ-ನ್ಯಾಯಾಂಗದ ನಡುವಿನ ಸಾಮರಸ್ಯದ ಸಮನ್ವಯ - ಇದು ಸಮಗ್ರ ಪ್ರಜಾಪ್ರಭುತ್ವದ ಬಹುಮುಖ್ಯ ಭಾಗ' ಎಂಬ ವಿಷಯದ ಮೇಲೆ ಸಮ್ಮೇಳನ ಜರುಗಿತ್ತು.

## ಸಂವಿಧಾನದ ಪೀಠಿಕೆ ಓದಿದ ರಾಷ್ಟ್ರಪತಿ

ಸಂವಿಧಾನ ದಿನದ ಹಿನ್ನೆಲೆಯಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ ಅವರು ಸಂವಿಧಾನದ ಪೀಠಿಕೆಯ ಭಾಗವನ್ನು ಓದಿದರು. ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಆಯೋಜಿಸಿದ್ದ ಲೈವ್ ಕಾರ್ಯಕ್ರಮದಲ್ಲಿ ಭಾಗಿಯಾದ ಸಾವಿರಾರು ಜನರು ಕೂಡ ರಾಷ್ಟ್ರಪತಿಗಳೊಂದಿಗೆ ಸಂವಿಧಾನದ ಪೀಠಿಕೆಯನ್ನು ಓದಿದರು.